## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ನ್ಯಾಯಾಲಯ,ಹೊಸಕೋಟೆ

## ಸಿಸಿ.ನಂ.510–2015

**ದಿನಾಂಕ 7ನೇ ಜೂನ್ 2024**

ಶ್ರೀ. ಶಂಕರಾಚಾರಿ.
ಬಿನ್. ಲೇಟ್ ನಂಜಾಚಾರಿ
ವಯಸ್ಸು 40 ವರ್ಷ,
ವಾಸ: ನಂದಶ್ರೀ ಚೌಲ್ಟರಿ ಬಳಿ,
ಗಟ್ಟಿಗನಬ್ಬೆ ರಸ್ತೆ,
ಎಂ.ವಿ.ಎಕ್ಸಟೆಂಷನ್,ಹೊಸಕೋಟೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ. .. .. ಪಿರ್ಯಾದುದಾರರು

–ವಿರುದ್ಧ–

ಕೆ.ಹೆಚ್.ಮುನಿವೆಂಕಟಸ್ವಾಮಿ.
ಬಿನ್. ಲೇಟ್ ಹೆಚ್.ಹನುಮಂತರಾಯಪ್ಪ,
ವಯಸ್ಸು 42 ವರ್ಷ,
ವಾಸ: ಕೊಳತೂರು ಗ್ರಾಮ,
ಕಸಬಾ ಹೋಬಳಿ,
ಹೊಸಕೋಟೆ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ. .. .. ಆರೋಪಿ

***

## ಅಪಾದನೆಯ ಸಾರಾಂಶ

ಅಕ್ಟೋಬರ್, ೨೦೧೩ರಲ್ಲಿ ಆರೋಪಿಯಾದ ನೀವು ಪಿರ್ಯಾದಿದಾರರಿಂದ ರೂ.10,00,000/–ಗಳನ್ನು ಕೈ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಕೈ ಸಾಲದ ಮರುಪಾವತಿಯ ಸಲುವಾಗಿ ದಿ: 10.03.2014 ರಂದು ರೂ.10,00,000/–ಗಳಿಗೆ ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹೊಸಕೋಟೆ ಶಾಖೆಯ ಚೆಕ್ಕು ಸಂಖ್ಯೆ 037059ನ್ನು ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದಿದಾರರು ನಗಧೀಕರಿಸಲು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಹೊಸಕೋಟೆ ಶಾಖೆಗೆ ಹಾಜರುಪಡಿಸಿದ್ದು, ಸದರಿ ಚೆಕ್ಕು ಮಾನ್ಯಗೊಳ್ಳದೆ ದಿನಾಂಕ:23/04/2014ರಂದು 'Account closed' ಎನ್ನುವ ಹಿಂಬರಹದೊಂದಿಗೆ ಹಿಂತಿರುಗೆ ಬಂದಿದ್ದು, ತದನಂತರ ದಿನಾಂಕ:20.05.2014 ವಕೀಲರ ಮೂಲಕ ನೋಟೀಸ್ ಜಾರಿ ಮಾಡಿದ್ದು, ಸದರಿ ನೋಟಿಸನ್ನು ಸ್ವೀಕರಿಸಿ ಈವರೆಗೂ ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದುದಾರರಿಗೆ ನೀಡದೆ, ಆ ಮೂಲಕ ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ. 138ರ ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಅಪಾದನೆ ಇದೆ.

ಪ್ರಶ್ನೆಃ1 ಃ ನಿಮಗೆ ಮೇಲೆ ಓದಿ ಹೇಳಿದ ಆಪಾದನೆ ಅರ್ಥವಾಯಿತೆ?
ಉತ್ತರ ಃ–

ಪ್ರಶ್ನೆಃ2 ಃ ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ
ಅಥವಾ ಪ್ರತಿರಕ್ಷೆ ಮಾಡಿಕೊಳ್ಳಲು ಬಯಸುತ್ತೀರಾ?
ಉತ್ತರಃ–

ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ, ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಳ್ಳಲಾಗಿದೆ ಎಂದು ಧೃಢೀಕರಿಸುತ್ತೇನೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಸಕೋಟೆ.